# ಕರ್ನಾಟಕ ಗೃಹ ಮಂಡಳಿ

Karnataka Housing Board
Building communities

## ಕರ್ನಾಟಕ ಗೃಹ ಮಂಡಳಿ ವಿವಿಧ ಬಡಾವಣೆಗಳ ಬೇಡಿಕೆ ಸಮೀಕ್ಷೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಮೈಸೂರು ಜಿಲ್ಲೆ. ಮೈಸೂರು ತಾಲ್ಲೂಕು, ಹುಣಸೂರು ತಾಲ್ಲೋಕು, ಕಲ್ಬುರ್ಗಿ ಜಿಲ್ಲೆ ಅಳಂದ ತಾಲ್ಲೋಕು, ಅಫಜಲ್‌ಪುರ ತಾಲ್ಲೋಕುಗಳಲ್ಲಿ ಮಂಡಳಿಯು ಜಂಟಿ ಸಹಭಾಗಿತ್ವದಡಿ ನಿವೇಶನ ಮತ್ತು ಸೇವೆಗಳು ಯೋಜನೆ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ. ಉದ್ದೇಶಿತ ಯೋಜನೆಯು ರಸ್ತೆ, ನೀರು, ಒಳಚರಂಡಿ, ವಿದ್ಯುತ್, ಉದ್ಯಾನವನ ಹಾಗು ಇನ್ನಿತರೆ ಎಲ್ಲಾ ಮೂಲಭೂತ ನಾಗರೀಕ ಸೌಲಭ್ಯಗಳನ್ನು ಹೊಂದಿರುತ್ತದೆ. ಈ ಯೋಜನೆಯಲ್ಲಿ ಮಂಡಳಿಯ ನಿಯಮಾವಳಿಗೆ ಅನುಗುಣವಾಗಿ ನಿವೇಶನಗಳನ್ನು ಹೊಂದಲು ಬಯಸುವ ಆಸಕ್ತ ಸಾರ್ವಜನಿಕರು ಅರ್ಜಿಯನ್ನು ಸಲ್ಲಿಸಿ ನೊಂದಾಯಿಸಿಕೊಳ್ಳಬಹುದಾಗಿದೆ.

**ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕಃ 10-01-2018**

| ಕ್ರ.ಸಂ. | ವರ್ಗ | ಸ್ವತ್ತುಗಳ ಅಳತೆ ಮೀಟರ್‌ಗಳಲ್ಲಿ | ನೊಂದಣಿ ಶುಲ್ಕ ರೂ.ಗಳಲ್ಲಿ | ಆರಂಭಿಕ ಠೇವಣಿ ರೂ.ಗಳಲ್ಲಿ |
|---|---|---|---|---|
| 1 | ಇ.ಡಬ್ಲ್ಯು.ಎಸ್. | 6x9 | 300/- | 3,000/- |
| 2 | ಎಲ್.ಐ.ಜಿ. | 9x12 | 500/- | 5,000/- |
| 3 | ಎಂ.ಐ.ಜಿ. | 9x15 | 1000/- | 10,000/- |
| 4 | ಹೆಚ್.ಐ.ಜಿ. | 12x18 | 1500/- | 15,000/- |

| ಕ್ರ. ಸಂ. | ಜಿಲ್ಲೆ ಮತ್ತು ತಾಲ್ಲೂಕು | ಸ್ಥಳ |
|---|---|---|
| 1 | ಮೈಸೂರು ಜಿಲ್ಲೆ. ಮೈಸೂರು ತಾಲ್ಲೂಕು | ಕಸಬಾ ಹೋಬಳಿ ರಮ್ಮನಹಳ್ಳಿ ಗ್ರಾಮ, ಸರ್ವೆ ಸಂ. 17,18,19,30,31,32, 33,34 ಮತ್ತು ಇತರೆಯಲ್ಲಿನ ಸುಮಾರು 200 ಎಕರೆ. |
| 2 | ಮೈಸೂರು ಜಿಲ್ಲೆ. ಹುಣಸೂರು ತಾಲ್ಲೂಕು | ಬಿಳಿಕೆರೆ ಹೋಬಳಿ, ಮನುಗನಹಳ್ಳಿ, ಅಂಕನಹಳ್ಳಿ, ದೊಡ್ಡಕಾಡನಹಳ್ಳಿ ಗ್ರಾಮ, ಸರ್ವೆ ನಂ.29,30,42,54,72 ಮತ್ತು ಇತರೆಯಲ್ಲಿನ ಸುಮಾರು 150 ಎಕರೆ. |
| 3 | ಕಲ್ಬುರ್ಗಿ ಜಿಲ್ಲೆ. ಅಳಂದ ತಾಲ್ಲೂಕು | ಅಳಂದ ತಾಲ್ಲೂಕು ಮತ್ತು ಗ್ರಾಮ, ಸರ್ವೆ ನಂ.133/1, 136/1 ಮತ್ತು 137/1 ರಲ್ಲಿನ ಸುಮಾರು 15 ಎಕರೆ 08 ಗುಂಟೆ. |
| 4 | ಕಲ್ಬುರ್ಗಿ ಜಿಲ್ಲೆ. ಅಫ್ಜಲ್‌ಪುರ ತಾಲ್ಲೂಕು | ಅಫಜಲ್‌ಪುರ ತಾಲ್ಲೂಕು ಮತ್ತು ಗ್ರಾಮ, ಸರ್ವೆ ನಂ.378/04 ಮತ್ತು 378/02 ರಲ್ಲಿನ ಸುಮಾರು 13 ಎಕರೆ 16 ಗುಂಟೆ. |

1. ಆಯಾ ವರ್ಗದಲ್ಲಿ ಅರ್ಜಿ ಸಲ್ಲಿಸಬಯಸುವವರು, ಅರ್ಜಿ ಶುಲ್ಕ ರೂ. 100/– ಪಾವತಿ ಮಾಡಿ, ಅರ್ಜಿಗಳನ್ನು ಕೆಳಗೆ ತಿಳಿಸಿರುವ ಬ್ಯಾಂಕ್‌ಗಳ ಸ್ಥಳೀಯ ಶಾಖೆಗಳಿಂದ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅದೇ ಬ್ಯಾಂಕ್‌ನಲ್ಲಿ ಖುದ್ದಾಗಿ ನೊಂದಣಿ ಶುಲ್ಕ ಮತ್ತು ನಿಗಧಿಪಡಿಸಿರುವ ಆರಂಭಿಕ ಠೇವಣಿ ಮೊತ್ತದೊಂದಿಗೆ ಸಲ್ಲಿಸತಕ್ಕದ್ದು, ಅಥವಾ ಮಂಡಳಿಯ ವೆಬ್‌ಸೈಟ್ (www.karnatakahousing.com)ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು.
2. ನೊಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮುಖಾಂತರ, ಡಿ. ಡಿ. ಮೂಲಕ ಸಹ ಪಾವತಿಸಬಹುದು. ಅಥವಾ ಆನ್‌ಲೈನ್ ಮೂಲಕ ಚಲನ್ ಪಡೆದು, ಕೆಳಗೆ ತಿಳಿಸಿರುವ ಬ್ಯಾಂಕ್‌ಗಳ ಯಾವುದೇ ಶಾಖೆಗಳಲ್ಲಿ ಪಾವತಿ ಮಾಡಬಹುದು.

| Sl. No. | Name of the Bank & Branch | Account No. |
|---|---|---|
| 1. | INDUSIND BANK Devaraj Urs Road Branch, Mysore **IFSC Code: INDB0000039** | **100021432876** |
| 2. | AXIS BANK, Super Market Branch, Kalburgi. **IFSC Code: UTIB0000342** | **915010023254516** |

ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ವೆಬ್‌ಸೈಟ್ www.karnatakahousing.com ಅಥವಾ www.khbcustomerinfo.com ರಲ್ಲಿ ಪಡೆಯಬಹುದು. ಹಾಗೂ ಉಪ ಪ್ರಧಾನ ವ್ಯವಸ್ಥಾಪಕರು(ಗ್ರಾಸೇ) ಹಾಗೂ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 1ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080-22273511 ವಿಸ್ತರಣೆ: 307/309/335/347 ರಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ದಿನಾಂಕ: 14-12-2017

ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು.

## ಅರ್ಜಿಗಳ ನೋಂದಣಿಗೆ ನಿಯಮ ಮತ್ತು ಷರತ್ತುಗಳು

1. ಈ ಅಧಿಕೃತ ಪ್ರಕಟಣೆಯನ್ನು ನಿಖರ ಬೇಡಿಕೆ ಸಮೀಕ್ಷೆಗಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಕರೆಯಲಾಗಿದೆ.
2. ಆಯಾ ವರ್ಗದಲ್ಲಿ ಅರ್ಜಿ ಸಲ್ಲಿಸಬಯಸುವವರು, ಅರ್ಜಿ ಶುಲ್ಕ ರೂ. 100/- ಪಾವತಿ ಮಾಡಿ, ಅರ್ಜಿಗಳನ್ನು ಕೆಳಗೆ ತಿಳಿಸಿರುವ ಬ್ಯಾಂಕ್‌ಗಳ ಸ್ಥಳೀಯ ಶಾಖೆಗಳಿಂದ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅದೇ ಬ್ಯಾಂಕ್‌ನಲ್ಲಿ ಖುದ್ದಾಗಿ ನೋಂದಣಿ ಶುಲ್ಕ ಮತ್ತು ನಿಗಧಿಪಡಿಸಿರುವ ಆರಂಭಿಕ ಠೇವಣಿ ಮೊತ್ತದೊಂದಿಗೆ ಸಲ್ಲಿಸತಕ್ಕದ್ದು, ಅಥವಾ ಮಂಡಳಿಯ ವೆಬ್‌ಸೈಟ್ (www.karnatakahousing.com)ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು.
3. ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮುಖಾಂತರ, ಡಿ. ಡಿ. ಮೂಲಕ ಸಹ ಪಾವತಿಸಬಹುದು. ಅಥವಾ ಆನ್‌ಲೈನ್ ಮೂಲಕ ಚಲನ್ ಪಡೆದು, ಕೆಳಗೆ ತಿಳಿಸಿರುವ ಬ್ಯಾಂಕ್‌ಗಳ ಯಾವುದೇ ಶಾಖೆಗಳಲ್ಲಿ ಪಾವತಿ ಮಾಡಬಹುದು.

| Sl. No. | Name of the Bank & Branch | Account No. |
|---|---|---|
| 1. | INDUS IND BANK Devraj Urs Road Branch, Mysore | 100021432876 |
| 2. | AXIS BANK, Super Market Branch, Kalburgi. | 915010023254516 |

4. ನಿಗಧಿಪಡಿಸಿರುವ ನೋಂದಣಿ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ.
5. ಇದೊಂದು ಬೇಡಿಕೆ ಸಮೀಕ್ಷೆ ಪ್ರಕಟಣೆಯಾಗಿದ್ದು, ಈ ಸಮೀಕ್ಷೆಗೆ ಅನುಗುಣವಾಗಿ ನಿರೀಕ್ಷಿತ ಬೇಡಿಕೆ ಬಂದಲ್ಲಿ ಮಂಡಳಿಯ ಹಂಚಿಕೆ ನಿಯಮಗಳಂತೆ ಯೋಜನೆಯನ್ನು ಹಮ್ಮಿಕೊಳ್ಳಲಾಗುವುದು.
6. ನಿವೇಶನಗಳನ್ನು ಒಂದೇ ಇಡಿಗಂಟಿನ (Outright sale) ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.
7. ಅರ್ಜಿ ಸಲ್ಲಿಸುವುದಕ್ಕೆ ಮೊದಲು 10 ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಕಾಲ ಅರ್ಜಿದಾರರು ಕರ್ನಾಟಕ ರಾಜ್ಯದ ಸಾಮಾನ್ಯ ನಿವಾಸಿಯಾಗಿರಬೇಕು.
8. ಅರ್ಜಿದಾರರು ನಗರ, ಪುರಸಭೆ ವ್ಯಾಪ್ತಿಯಲ್ಲಿ ಗಂಡ/ಹೆಂಡತಿ ಅಪ್ರಾಪ್ತ ವಯಸ್ಕ ಮಕ್ಕಳ ಹೆಸರಿನಲ್ಲಿ ಮನೆ ಅಥವಾ ನಿವೇಶನವನ್ನು ಹೊಂದಿರಬಾರದು. ಮತ್ತು ಕರ್ನಾಟಕ ಗೃಹ ಮಂಡಳಿಯಿಂದಾಗಲಿ ಅಥವಾ ಇನ್ನಿತರೆ ಯಾವುದೇ ಪ್ರಾಧಿಕಾರದಿಂದಾಗಲಿ ಮನೆ/ನಿವೇಶನ ಪಡೆದಿರುವುದಿಲ್ಲವೆಂದು ನೋಟರಿ ಮೂಲಕ ಪ್ರಮಾಣೀಕರಿಸಿದ ಪ್ರಮಾಣಪತ್ರ (ಅಫಿಡವಿಟ್) ಸಲ್ಲಿಸಬೇಕು.
9. ಅರ್ಜಿಗಳನ್ನು ನಿಗಧಿತ ನೋಂದಣಿ ಶುಲ್ಕ ಪಾವತಿಯೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ: -----------
10. ಅರ್ಜಿದಾರರು ಮುಂದಿನ ಪರಾಮರ್ಶೆಗಾಗಿ ಎಲ್ಲಾ ಪತ್ರ ವ್ಯವಹಾರಗಳ ಪ್ರತಿಗಳನ್ನು ತಮ್ಮಲ್ಲಿಟ್ಟುಕೊಂಡು ಪತ್ರ ವ್ಯವಹಾರಗಳಲ್ಲಿ ನೋಂದಣಿ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದು.
11. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ಮೈಸೂರು, ಕಲ್ಬುರ್ಗಿ ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: (ಮೈಸೂರು) 0821-2543237 ಮೊಬೈಲ್ ಸಂಖ್ಯೆ: 8884201692 ರಲ್ಲಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಯೋಜನಾ ಕಛೇರಿ, ಕಲ್ಬುರ್ಗಿ ದೂರವಾಣಿ ಸಂಖ್ಯೆ: 08472-254010 ಮೊಬೈಲ್ ಸಂಖ್ಯೆ: 9448378699 ರಲ್ಲಿ ಸಂಪರ್ಕಿಸಬಹುದು. ಅಥವಾ ಉಪ ಪ್ರಧಾನ ವ್ಯವಸ್ಥಾಪಕರು (ಗ್ರಾಸೇ) ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 'ಎಫ್' ಬ್ಲಾಕ್, 4ನೇ ಮಹಡಿ, ಕಾವೇರಿಭವನ, ಬೆಂಗಳೂರು ಅಥವಾ ಸಹಾಯಕ ಕಂದಾಯ ಅಧಿಕಾರಿ-1 ಮತ್ತು 2, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 'ಎಫ್' ಬ್ಲಾಕ್, 4ನೇ ಮಹಡಿ, ಕಾವೇರಿಭವನ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080-22273511-335, 307, 309 ಮತ್ತು 363 ರಲ್ಲಿ

ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ. ಅಲ್ಲದೇ ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ಅಂತರಜಾಲ (WEB SITE) www.karnatakahousing.com or www.khbcustomerinfo.com ಅನ್ನು ಸಂಪರ್ಕಿಸುವುದು.

ಗೃಹ ಆಯುಕ್ತರು<br>
ಕರ್ನಾಟಕ ಗೃಹ ಮಂಡಳಿ<br>
ಬೆಂಗಳೂರು